# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಸಿಂಧನೂರು ಜಿ॥ ರಾಯಚೂರು

ಸಂಖ್ಯೆ:ಎ7:ಖಾಪ್ರಾಶಾ:ಪ್ರ.ಮಾ.ನವೀ:06:2013-14 ದಿನಾಂಕ: 30-10-2013

ಪ್ರಪತ್ರ ನಮೂನೆ : 3

ಪ್ರಥಮ ಮಾನ್ಯತೆ ಆದೇಶ

"ಸಕಾಲ" ತುರ್ತು-ಸೇವೆ

ನೆಕ್ಸ್‌ಜೆನ್ ಎಜ್ಯೂಕೇಶನಲ್ ಟ್ರಸ್ಟ್ (ರಿ) ಹೈದರಾಬಾದ್ ಇವರ ಗೌರ್ನಿಂಗ್ ಕೌನ್ಸಿಲ್ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಯಾಕ್ಟ್-1-1995) ಸೆಕ್ಷನ್ 38ರಂತೆ ಈ ದಿನ ದಿ. 30-10-2013ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಗೆ ಪ್ರಥಮ ಮಾನ್ಯತೆ ಮತ್ತು ಮಾನ್ಯತೆ ನವೀಕರಣ ನೀಡಿದೆ ಎಂದು ಪ್ರಮಾಣೀಕರಿಸಲಾಗಿದೆ.

01. ನೊಂದಣಿ ಸಂಖ್ಯೆ : 09/2013-14
02. ಶಾಲೆಯ ವಿಳಾಸ : ಶ್ರೀ ಚೈತನ್ಯ ಕಿರಿಯ ಪ್ರಾಥಮಿಕ ಶಾಲೆ, ಸಿಂಧನೂರು ಜಿ॥ ರಾಯಚೂರು
03. ಮಾನ್ಯತೆ ನೀಡಿರುವ ಮಾಧ್ಯಮ : 1 ರಿಂದ 5ನೇ ತರಗತಿ ಕನ್ನಡ ಮಾಧ್ಯಮ
04. ಮಾನ್ಯತೆ ನೀಡಿರುವ ತರಗತಿಗಳು : 1 ರಿಂದ 5ನೇ ತರಗತಿ (ಕ.ಮಾ)
05. ಮಾನ್ಯತೆ ನವೀಕರಿಸಿದ ವರ್ಷ : 2012-13ಕ್ಕೆ ಪ್ರಥಮ ಮಾನ್ಯತೆ ಹಾಗೂ 2013-14 ರಿಂದ 2016-17ನೇ ಸಾಲಿನ ವರೆಗೆ 1 ರಿಂದ 5ನೇ (ಕ.ಮಾ) ತರಗತಿವಾರು, ಮಾನ್ಯತೆ ನವೀಕರಣ ನೀಡಲಾಗಿದೆ.

**ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಾನ್ಯತೆ ನೀಡಿದೆ.**

1. ಶಿಕ್ಷಣ ಕಾಯ್ದೆಡಿಯಲ್ಲಿ ನಿಯಮಗಳನ್ನು ಸರ್ಕಾರದ ಹಾಗೂ ಇಲಾಖೆಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು
2. ಈ ಶಾಲೆಗೆ ಮೂರು ವರ್ಷದ ಒಳಗಾಗಿ ಸ್ವಂತ ಕಟ್ಟಡವನ್ನು ಹೊಂದಬೇಕು & ವಿದ್ಯುತ್ ಸೌಲಭ್ಯವನ್ನು ಒದಗಿಸಬೇಕು.
3. ನೇಮಕಾತಿಗಳನ್ನು ಸರ್ಕಾರಿ ಆದೇಶಗಳ ಪ್ರಕಾರ ಮಾಡುವುದು.
4. ಎಲ್ಲಾ ವರ್ಗದ ಮಕ್ಕಳಿಗೆ ಪ್ರವೇಶ ಅವಕಾಶ ಕಲ್ಪಿಸತಕ್ಕದ್ದು. & ಪ್ರವೇಶಗಳು ಮೀಸಲಾತಿ ನಿಯಮಗಳನ್ವಯ ಇರತಕ್ಕದ್ದು. **ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯ ನಿಯಮಗಳನ್ನು** ಅನುಸರಿಸುವುದು.
5. ಶಿಕ್ಷಕರುಗಳ ನೇಮಕಾತಿಯು ತರಗತಿ ವಿದ್ಯಾರ್ಥಿಗಳ ಅನುಪಾತ 1:40ರಂತೆ ಇರಬೇಕು.
6. ಶಾಲೆ ನಡೆಸಲು ಅಗತ್ಯವಾದ ಸ್ಥಳವಕಾಶ,ಪಾಠೋಪಕರಣ,ಪೀಠೋಪಕರಣ & ಆಟದ ಮೈದಾನ ಇವುಗಳನ್ನು ಒದಗಿಸಬೇಕು.
7. ಇಲಾಖೆಯ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು & ಇದರ ಲೆಕ್ಕಪತ್ರಗಳನ್ನು ನಿರ್ವಹಿಸಿ ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಸಾದರಪಡಿಸಬೇಕು.
8. ಪ್ರತಿ ವರ್ಷ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿಸಿ ವರದಿ ಸಲ್ಲಿಸಬೇಕು
9. ಇಲಾಖಾ ಪೂರ್ವಾನುಮತಿ ಇಲ್ಲದೆ ಹೆಚ್ಚುವರಿ ತರಗತಿ ವಿಭಾಗಗಳನ್ನು ತೆರೆಯಬಾರದು.
10. ರೂ.20,000/-ಗಳನ್ನು ಸ್ಥಿರನಿಧಿಯಾಗಿ ಜಂಟಿ ಖಾತೆಯಲ್ಲಿ ತೊಡಗಿಸಬೇಕು.
11. ಇಲಾಖೆಯು ನಿಗದಿಪಡಿಸಿರುವ ಪಠ್ಯಕ್ರಮಗಳನ್ನು ಅನುಸರಿಸಬೇಕು.
12. ದಾಖಲಾತಿ, ಹಾಜರಾತಿಯನ್ನು ಉತ್ತಮಪಡಿಸಬೇಕು. ಮತ್ತ ಆರ್.ಟಿ.ಇ. ನಿಯಮಗಳಂತೆ ದಾಖಲಾತಿ ಮಾಡಿಕೊಳ್ಳುವುದು.
13. ಎಲ್ಲಾ ಶಿಕ್ಷಕ ಸಿಬ್ಬಂದಿಯ ಸೇವಾ ಪುಸ್ತಕಗಳನ್ನು ನಿರ್ವಹಿಸಿ ಹಾಗೂ ಅವರ ವೇತನವನ್ನು ಬ್ಯಾಂಕ್ ಖಾತೆಯ ಮೂಲಕ ಪಾವತಿಸಬೇಕು.

31/10/13

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಿಂಧನೂರು

ಗೆ,
ಅಧ್ಯಕ್ಷರು / ಕಾರ್ಯದರ್ಶಿ
ನೆಕ್ಸ್‌ಜೆನ್ ಎಜ್ಯೂಕೇಶನಲ್ ಟ್ರಸ್ಟ್.(ರಿ)
~~ಸಿಂಧನೂರು~~ ಹೈದರಾಬಾದ್.

ಇದರ ಪ್ರತಿಯನ್ನು :- 1. ಮುಖ್ಯೋಪಾದ್ಯಾಯರು, ಶ್ರೀ ಚೈತನ್ಯ ಟೆಕ್ನೋ ಕಿರಿಯ ಪ್ರಾಥಮಿಕ ಶಾಲೆ, ಸಿಂಧನೂರು ಜಿ॥ ರಾಯಚೂರು ಇವರ ಮಾಹಿತಿಗಾಗಿ
2. ಕಛೇರಿ ಕಡತಕ್ಕೆ.

Scanned with CamScanner

printed

# ಕರ್ನಾಟಕ ಸರಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಛೇರಿ
## ಐವಾನ-ಎ-ಶಾಹಿ ಬಡಾವಣೆ ಗುಲಬರ್ಗಾ

ಸಂಖ್ಯೆ ಸಿ4(5)ಖಾಪ್ರೌಶಾ ಹೊಪ್ರೌಶಾ ಅನು/51/2012-13 ದಿನಾಂಕ:07-06-2012

ನಮೂನೆ-2

ನಿಯಮ 3 ಉಪನಿಯಮ 5(ಬಿ)

ಪ್ರಮಾಣ ಪತ್ರ ಸಂಖ್ಯೆ 88/2012-2013

ನೆಕ್ಸ್ ಜೆನ್ ಎಜ್ಯುಕೇಶನ್ ಟ್ರಸ್ಟ ಪ್ಲಾಟ ನಂ 80ಶ್ರೀ ಸಾಯಿ ಪ್ಲಾಜ ಅಯ್ಯಾಪ್ಪ ಸೊಸೈಟಿ ಮಾದಾಪೂರು ಹೈದ್ರಾಬಾದ.5000081 ಜಿಲ್ಲಾ ;ರಾಯಚೂರು ಇವರ ಗವರ್ನಿಂಗ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ 1-1995 ಸೆಕ್ಷನ 31 ರಂತೆ ಈ ದಿನಾಂಕ 07-06-2012 ರಿಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1 | ಕ್ರಮ ಸಂಖ್ಯೆ | 88/2012-13 |
| 2 | ಶಿಕ್ಷಣ ಸಂಸ್ಥೆಯ ವಿವರ | ನೆಕ್ಸ ಜೆನ್ ಎಜ್ಯುಕೇಶನ್ ಟ್ರಸ್ಟ ಪ್ಲಾಟ ನಂ 80ಶ್ರೀ ಸಾಯಿ ಪ್ಲಾಜ ಅಯ್ಯಾಪ್ಪ ಸೊಸೈಟಿ ಮಾದಾಪೂರು ಹೈದ್ರಾಬಾದ.5000081 |
| 3 | ಅನುಮತಿ ನೀಡಿದ ಪ್ರೌಢ ಶಾಲೆಯ ಹೆಸರು | ಶ್ರೀ ಚೈತನ್ಯ ಟೆಕ್ನೋ ಪ್ರೌಡಶಾಲೆ ಸಿಂಧನೂರು |
| 4 | ಅನುಮತಿ ನೀಡಿದ ತರಗತಿ | 8, 9 ಮತ್ತು 10ನೇ ತರಗತಿ |
| 5 | ಪ್ರಾರಂಭಿಸಬೇಕಾದ ತರಗತಿಗಳು ಹಾಗೂ ಶೈಕ್ಷಣಿಕ ವರ್ಷ | 8 ನೇ ತರಗತಿ 2012-13<br>9ನೇ ತರಗತಿ 2013-14<br>10ನೇ ತರಗತಿ 2014-15 |
| 6 | ಅನುಮತಿ ನೀಡಿದ ಮಾಧ್ಯಮ | ಆಂಗ್ಲ ಮಾಧ್ಯಮ |
| 7 | ಶುಲ್ಕ ಪಾವತಿ ಮಾಡಿರುವದು | ರೂ, 10,000-00 |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ : 88 ಪುಟ ಸಂಖ್ಯೆ 08 ವಾಲ್ಯೂಂ 03 ಸಂಖ್ಯೆ ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ.

ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ (ನೊಂದಣಿ) ಅನುಮತಿಯನ್ನು ರದ್ದು ಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1. ಈ ನೊಂದಣೆಯ ನಿಯಮ 3(5)(4) ಕ್ಕೆ ಒಳಪಟ್ಟಿರುತ್ತದೆ.
2. ಗವರ್ನಿನಿಂಗ ಕೌನ್ಸಿಲ್ ಇವರು ನಿಯಮ 4(4)ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ ವಿಸ್ತೀರ್ಣ ಕಟ್ಟಡ ಪಾಠ ಪೀಠೋಪಕರಣಗಳು ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
4. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
5. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವದಿಲ್ಲ.
6. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿಯೇ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸಕ್ಷಮ ಪ್ರಾಧಿಕಾರವಾದ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಗುಲಬರ್ಗಾ ಇವರ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದಲ್ಲ.
7. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು ಕರ್ನಾಟಕ ಶಿಕ್ಷಣ ಮಸೂದೆ 1983 (ಆಕ್ಟ ಆಫ್ 1995) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಇದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.
8. ಈ ಪ್ರೌಢ ಶಾಲಾ ನೊಂದಣೆಯಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 175 ಪಿಎಂಸಿ 95 ದಿನಾಂಕ ;7-9-1998 ಮತ್ತು 29-12-1998 ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ ಆಡಳಿತ ಮಂಡಳಿಯು ಸರಕಾರದಿಂದ ಯಾವುದೇ ಅನುದಾನವನ್ನು ಬಯಸುವದಿಲ್ಲವೆಂದು ರೂ 20.00 ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡಬಹುದು.
9. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಮತ್ತು ನಿಯಂತ್ರಣ) ನಿಯಮ 1999 ರ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು ಅವುಗಳಿಗೆ ಬದ್ದರಾಗಿರತಕ್ಕದ್ದು.
10. ಇಲಾಖೆ ಹಾಗೂ ಸರ್ಕಾರ ನಿಗದಿ ಪಡಿಸಿದ ಪಠ್ಯ ಪುಸ್ತಕ, ಪರೀಕ್ಷಾ ಕ್ರಮ ಇತ್ಯಾದಿ ತಪ್ಪದೆ ಅಳವಡಿಸತಕ್ಕದ್ದು.

Scanned with CamScanner

## ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ,ರಾಯಚೂರು.

ಸಂಖ್ಯೆ:ಎವಿ4/ಖಾಪ್ರೌಶಾ/ಪ್ರಮಾ/106/2013–14 ದಿನಾಂಕ:12–12–2013

ಪ್ರಪತ್ರ–3

**ಪ್ರಥಮ ಮಾನ್ಯತೆ ಆದೇಶ**

1. ನೋಂದಣಿ ಸಂಖ್ಯೆ : 08/2013–14
2. ಗವರ್ನಿಂಗ್ ಕೌನ್ಸಿಲ್ : ನೆಕ್ಸ್ ಜೆನ್ ಎಜ್ಯುಕೇಶನ್ ಟ್ರಸ್ಟ ಹೈದ್ರಾಬಾದ್.
3. ಶಾಲೆಯ ಹೆಸರು/ವಿಳಾಸ : ಶ್ರೀ.ಚೈತನ್ಯ ಟೆಕ್ನೋ ಪ್ರೌಢ ಶಾಲೆ, ಸಿಂಧನೂರು.
4. ಶಿಕ್ಷಣ ಸಂಸ್ಥೆಯ (ಶಾಲೆ) ವರ್ಗ ದರ್ಜೆ : ಪ್ರೌಢ ಶಾಲೆ 8, 9, 10ನೇ ತರಗತಿಗಳು
   ಅನುಮೋದಿತ ತರಗತಿಗಳು : 2012–13 ನೇ ಸಾಲಿಗೆ–8 ನೇ ತರಗತಿಗೆ ಹಾಗೂ 2013–14 ನೇ ಸಾಲಿಗೆ 9 ನೇ ತರಗತಿಗೆ ಪ್ರಥಮ ಮಾನ್ಯತೆ ನೀಡಿದೆ ಹಾಗೂ ಮಾನ್ಯತೆ ನವೀಕರಿಸಿದೆ.
5. ಮಾಧ್ಯಮ : ಆಂಗ್ಲ ಮಾಧ್ಯಮ.
6. ಷರತ್ತುಗಳನ್ನು ಪೂರೈಸಲು ನೀಡಲಾದ ಸಮಯ : ಮುಂದಿನ ಶೈಕ್ಷಣಿಕ ವರ್ಷದೊಳಗೆ ಪೂರೈಸತಕ್ಕದ್ದು.

ಸದರಿ ಶಿಕ್ಷಣ ಸಂಸ್ಥೆ ತಾತ್ಕಾಲಿಕ ಪ್ರಥಮ ಮಾನ್ಯತೆಯನ್ನು ನೀಡಲಾಗಿದೆ. ಮಾನ್ಯತೆ ಆದೇಶ ನೀಡುವ ಸಂಬಂಧ ಈ ಕಛೇರಿಯ ಮಾನ್ಯತೆ ರಿಜಿಸ್ಟರ್‌ನ ಕ್ರ.ಸಂ: 08/2013–14 ಪುಟ ಸಂಖ್ಯೆ: 108 ರಲ್ಲಿ-ದಾಖಲಿಸಿಕೊಳ್ಳಲಾಗಿದೆ.

ಈ ಮಾನ್ಯತೆ ಪ್ರಪತ್ರವನ್ನು ಈ ಕೆಳಕಾಣಿಸಿದ ಷರತ್ತುಗಳಿಗೆ ಒಳಪಟ್ಟು ನೀಡಲಾಗಿದೆ.

1. ಸ್ವಂತ ಶಾಲೆ ಕಟ್ಟಡವನ್ನು ನಿರ್ವಹಿಸಬೇಕು.
2. ಮಕ್ಕಳ ಸಂಖ್ಯೆ ಪ್ರತಿ ತರಗತಿಯಲ್ಲಿ ಕನಿಷ್ಠ 30 ಗರಿಷ್ಠ 70 ದಾಖಲಾತಿ ಹಾಗೂ ಕನಿಷ್ಠ 25, ಹಾಜರಾತಿ ಇರಬೇಕು.
3. ಶಾಲಾ ಮಕ್ಕಳಿಗೆ ಆಟದ ಮೈದಾನ ಒದಗಿಸುವುದು.
4. ಇಲಾಖೆಯಿಂದ ನಿಗದಿಪಡಿಸಿದ ಫೀ ದರಗಳಷ್ಟೇ ವಿದ್ಯಾರ್ಥಿಗಳಿಂದ ವಸೂಲಿ ಮಾಡಬೇಕು. ಯಾವುದೇ ಕಾರಣಕ್ಕೂ ಹೆಚ್ಚಿನ ವಸೂಲಿ ಮಾಡಬಾರದು.
5. ಎಲ್ಲಾ ಮಕ್ಕಳಿಗೂ ಮೀಸಲಾತಿ ಅನ್ವಯ ದಾಖಲಾತಿಗೆ ಅವಕಾಶ ನೀಡಬೇಕು.
6. ಎಲ್ಲಾ ತರಗತಿಗಳಲ್ಲಿ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಬೇಕು.
7. ತರಬೇತಿ ಹೊಂದಿರುವ ಶಿಕ್ಷಕರನ್ನು ಹಾಗೂ ನಿಯಮಾನುಸಾರವಾಗಿ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನೇ ನೇಮಕಾತಿ ಮಾಡತಕ್ಕದ್ದು ಮತ್ತು ನೇಮಕಾತಿ ಮಾಡಿಕೊಳ್ಳುವಾಗ ಮೀಸಲಾತಿಯನ್ನು ಕಡ್ಡಾಯವಾಗಿ ಪಾಲಿಸುವುದು.
8. ಪ್ರತಿ ವರ್ಷ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ/ಶಿಕ್ಷಕರ ಕಲ್ಯಾಣ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ನಿಧಿಗಳನ್ನು ಸರಕಾರಕ್ಕೆ ತಪ್ಪದೇ ಪಾವತಿಸುವುದು.

ಉಪನಿರ್ದೇಶಕರು(ಆ),
ಸಾರ್ವಜನಿಕ ಶಿಕ್ಷಣ ಇಲಾಖೆ,ರಾಯಚೂರು.

ಮುಖ್ಯೋಪಾಧ್ಯಾಯರು,
ಶ್ರೀ.ಚೈತನ್ಯ ಟೆಕ್ನೋ ಪ್ರೌಢ ಶಾಲೆ, ಸಿಂಧನೂರು.

**ಪ್ರತಿಯನ್ನು:**

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿಂಧನೂರು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ನೀಡಿದೆ.

Scanned with CamScanner

# ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ ರಾಯಚೂರು.

ಸಂಖ್ಯೆ: ಲೆವಿ4/ಖಾಪ್ರೌಶಾ/ಪ್ರ.ಮಾ.ನವೀ/22/2014–15 ದಿನಾಂಕ: 14–08–2014

## ನಮೂನೆ – 5

## ಮಾನ್ಯತೆ ನವೀಕರಣ ಆದೇಶ

| | | |
|---|---|---|
| 1. | ನೋಂದಣಿ ಸಂಖ್ಯೆ | : 88/2012–13 |
| 2. | ಗವರ್ನಿಂಗ್ ಕೌನ್ಸಿಲ್ | : ನೆಕ್ಸ್ ಜೆನ್ ಎಜ್ಯುಕೇಶನ್ ಟ್ರಸ್ಟ್ ಪ್ಲಾಂಟ್ ನಂ80 ಶ್ರೀ ಸಾಯಿ ಪ್ಲಾಜ ಅಯ್ಯಪ್ಪ ಸೊಸೈಟಿ ಮಾದಾಪೂರು ಹೈದ್ರಾಬಾದ್ |
| | ಹಾಗೂ ಶಾಲೆಯ ಹೆಸರು | : ಶ್ರೀ ಚೈತನ್ಯ ಟೆಕ್ನೋ ಪ್ರೌಢಶಾಲೆ ಸಿಂಧನೂರು |
| 3. | ಮಾನ್ಯತೆ ನವೀಕರಣದ ಅವಧಿ | : 2014–15ನೇ ಸಾಲಿಗೆ 10ನೇ ತರಗತಿಗೆ ಪ್ರಥಮ ಮಾನ್ಯತೆ ಹಾಗೂ 2014–15 ರಿಂದ 2018–19 ವರೆಗೆ ಮಾನ್ಯತೆ ನವೀಕರಣ |
| 4. | ತರಗತಿಗಳು | : 8, 9 10ನೇ ತರಗತಿಗಳು (ಒಂದು ವಿಭಾಗಕ್ಕೆ) |
| 5. | ಅನುದಾನ ಸಹಿತ: ಅನುದಾನ ರಹಿತ | : ಅನುದಾನ ರಹಿತ |
| 6. | ಮಾಧ್ಯಮ | : ಆಂಗ್ಲ ಮಾಧ್ಯಮ |

ಮಾನ್ಯತೆ ನವೀಕರಣವನ್ನು 2014–15 ರಿಂದ 2018–19 ರವರೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲಾಗಿದೆ.

1. ಶಿಕ್ಷಣ ಮಸೂದೆ ನೀತಿ ನಿಯಮಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು.
2. ಯಾವುದೇ ಸಂದರ್ಭದಲ್ಲಿ ಇಲಾಖೆಯಿಂದ ನಡೆಯುವ ಯಾವುದೇ ಪರೀಕ್ಷೆಗಳಿಗೆ ತರಬೇತಿ, ಗಣತಿ, ಕಾರ್ಯ, ಇತ್ಯಾದಿ ಇಲಾಖಾ ಕೆಲಸಗಳಿಗೆ ಶಾಲಾ ಕಟ್ಟಡವನ್ನು ಬಿಟ್ಟು ಕೊಡತಕ್ಕದ್ದು.
3. ಕಾಲಕಾಲಕ್ಕೆ ಇಲಾಖೆ ಅಧಿಕಾರಿಗಳು ತಪಾಸಣೆಗೆ ಬಂದಾಗ ಎಲ್ಲಾ ದಾಖಲೆಗಳನ್ನು ಸಾದರಪಡಿಸತಕ್ಕದ್ದು.
4. ಎಲ್ಲಾ ವರ್ಗದ ಮಕ್ಕಳಿಗೆ ಪ್ರವೇಶ ಅವಕಾಶ ಕಲ್ಪಿಸತಕ್ಕದ್ದು. & ಪ್ರವೇಶಗಳು ಮೀಸಲಾತಿ ನಿಯಮಗಳನ್ವಯ ಇರತಕ್ಕದ್ದು.
5. ಇಲಾಖೆ ನಿಗಧಿಪಡಿಸಿದ ಫೀ ದರಗಳಷ್ಟೇ ವಿದ್ಯಾರ್ಥಿಗಳಿಂದ ವಸೂಲಿ ಮಾಡಬೇಕು. ಹಾಗೂ ಇಲಾಖೆ ನಿಗಧಿ ಪಡಿಸಿದ ಪಠ್ಯ ಕ್ರಮವನ್ನೆ ಪಾಲಿಸತಕ್ಕದ್ದು.
6. ಗವರ್ನಿಂಗ್ ಕೌನ್ಸಿಲ್ ಮತ್ತು ಮ್ಯಾನೇಜಿಂಗ್ ಕಮೀಟಿ ಸದಸ್ಯರುಗಳ ಮತ್ತು ಪೋಷಕ ಶಿಕ್ಷಕರ ಸಮಿತಿಯ ಪಟ್ಟಿಗಳನ್ನು ಶಾಲಾ ಕಛೇರಿಯಲ್ಲಿ ಇಟ್ಟಿರತಕ್ಕದ್ದು.
7. ನಿಗಧಿಪಡಿಸಿದ ಕನಿಷ್ಟ ಮಕ್ಕಳ ಸಂಖ್ಯೆ ಹಾಜರಾತಿ ಇರತಕ್ಕದ್ದು.
8. ತರಬೇತಿ ಹೊಂದಿದ ಶಿಕ್ಷಕರನ್ನೇ ನೇಮಿಸತಕ್ಕದ್ದು.
9. ಸರಕಾರಿ ನಿಯಮಗಳನ್ವಯ ಮೂಲಭೂತ ಸೌಕರ್ಯವನ್ನು ಶಿಕ್ಷಕರಿಗೆ ಬ್ಯಾಂಕ್ ಮುಖಾಂತರ ವೇತನ ಪಾವತಿ, ರಜಾ ಸೌಲಭ್ಯ ನೀಡತಕ್ಕದ್ದು.

ಉಪನಿರ್ದೇಶಕರು (ಆ),
ಸಾರ್ವಜನಿಕ ಶಿಕ್ಷಣ ಇಲಾಖೆ ರಾಯಚೂರು.

ಗೆ,
ಮುಖ್ಯೋಪಾಧ್ಯಾಯರು,
ಶ್ರೀ ಚೈತನ್ಯ ಟೆಕ್ನೋ ಪ್ರೌಢಶಾಲೆ ಆಂಗ್ಲ ಮಾಧ್ಯಮ
ಸಿಂಧನೂರು ಜಿ:ರಾಯಚೂರು.

**ಇದರ ಪ್ರತಿಯನ್ನು ಮಾಹಿತಿಗಾಗಿ:**

1. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿಂಧನೂರು ಇವರ ಮಾಹಿತಿಗಾಗಿ.

MANYATE NAVIKARAN ADESH (NAMUNE-5)

Scanned with CamScanner